ಅ) 1996-97ನೇ ಸಾಲಿನಲ್ಲಿ ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡುವಲ್ಲಿಯ ಸರ್ಕಾರದವರ ಮುಂದಿದೆಯೇ;

ಆ) ಹಾಗಿದ್ದಲ್ಲಿ ಕೊಪ್ಪಳ ತಾಲ್ಲೂಕಿನ

1. ಗೂಡ್ಲಿನೂರು ಕಾತರಕಿ

2. ಕೂಕನಹಳ್ಳಿ

3. ಹೀರೆಪಗನಳ್ಳಿ

ಗ್ರಾಮಗಳಲ್ಲಿ ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇನ್ನೂ ನಿರ್ಧರಿಸಿರುವುದಿಲ್ಲ.

ಆ) ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವ ಸಮಯದಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಭೀಮಾನಗರ ವಸತಿ ಗೃಹಗಳಿಗೆ ಸುಣ್ಣ ಬಣ್ಣ ಮಾಡಿಸುವುದು.

656 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೀವನ್ ಭೀಮಾ ನಗರದಲ್ಲಿ ವಸತಿಗೃಹಗಳಿಗೆ ಪ್ರತಿ ವರ್ಷ ಡಿಸ್ಟೆಂಪರ್ ಮತ್ತು ಬಣ್ಣಗಳನ್ನು ಮಾಡಿಸುತ್ತಿರುವುದು ನಿಜವಲ್ಲವೆ,

ಆ) ಅದೇ ರೀತಿ ರಾಜಾಜಿನಗರದಲ್ಲಿರುವ ವಸತಿ ಗೃಹಗಳಿಗೂ ಸಹ ಡಿಸ್ಟೆಂಪರ್ಮತ್ತು ಬಣ್ಣಗಳನ್ನು ಮಾಡಿಸಬೇಕಾಗಿದ್ದು, ಮಾಡಿಸದಿರಲು ಕಾರಣಗಳೇನು?

ಇ) ರಾಜಾಜಿನಗರದಲ್ಲಿರುವ ವಸತಿಗೃಹಗಳ ನಿವಾಸಿಗಳಿಂದ ಬಾಡಿಗೆ ವಸೂಲಾಗುತ್ತಿಲ್ಲವೆ. ಬಾಡಿಗೆ ವಸೂಲಾಗುತ್ತಿದ್ದರೂ ರಾಜಾಜಿನಗರದಲ್ಲಿರುವ ವಸತಿಗೃಹಗಳಿಗೆ ಸುಣ್ಣ ಬಣ್ಣ ಮಾಡಿಸದಿರಲು ಕಾರಣಗಳೇನು?

ಈ) ಜೀವನಭೀಮಾನಗರದಲ್ಲಿರುವ ವಸತಿಗೃಹಗಳಲ್ಲಿರುವ ಸೌಲಭ್ಯಗಳಂತೆ ರಾಜಾಜಿನಗರದಲ್ಲಿರುವ ವಸತಿಗೃಹಗಳಿಗೂ ಸಹ ಸೌಲಭ್ಯಗಳನ್ನು ಕಲ್ಪಿಸಲು ಅನೇಕಬಾರಿ ಮನವಿ ಸಲ್ಲಿಸಿದ್ದರೂ ಸಹ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು?

ಉ) ಜೀವನಭೀಮಾನಗರದಲ್ಲಿರುವ ವಸತಿಗೃಹಗಳಲ್ಲಿರುವ ಸೌಲಭ್ಯಗಳಂತೆ ರಾಜಾಜಿನಗರದ ವಸತಿಗೃಹಗಳಿಗೂ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿಗಳು) :

ಅ) ಪ್ರತಿ ವರ್ಷವೂ ಡಿಸ್ಪೆಂಪರ್ ಮತ್ತು ಬಣ್ಣಗಳನ್ನು ಮಾಡಿಸುತ್ತಿಲ್ಲ.

ಆ) ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ರಾಜಾಜಿನಗರದಲ್ಲಿರುವ ಸರ್ಕಾರಿ ವಸತಿಗೃಹಗಳ ನಿಯಮಾನುಸಾರವಾಗಿ ನಾಮಮಾತ್ರವಾದ ಬಾಡಿಗೆಯನ್ನು ವಿಧಿಸಿ ವಸೂಲುಮಾಡಲಾಗುತ್ತಿದೆ. ಹಾಗೂ ನಿರ್ವಹಣೆ ಕಾರ್ಯವನ್ನು ನಿಯಮದಂತೆ ನಿಗಧಿಪಡಿಸಿರುವ ಅನುದಾನಕ್ಕೆ ಒಳಪಟ್ಟು ಮಾಡಲಾಗುತ್ತಿದೆ.

ಈ) ರಾಜಾಜಿನಗರದಲ್ಲಿ ನಿರ್ಮಿಸಿರುವ ವರ್ಗದ ಮಾದರಿ ವಸತಿಗೃಹಗಳಿಗೆ, ನಿಯಮಾನುಸಾರವಾಗಿ ಒದಗಿಸಬೇಕಾಗಿರುವ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗಿದೆ.

ಉ) ಮೇಲಿನ (ಈ) ಉತ್ತರದ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜಾಜಿನಗರ ಸರ್ಕಾರಿ ವಸತಿ ಗೃಹಗಳ ಬಗ್ಗೆ.

657 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜಾಜಿನಗರದ ವಸತಿಗೃಹಗಳು 25 ವರ್ಷಗಳಷ್ಟು ಹಳೆಯದಾಗಿದ್ದು, ಈಗಾಗಲೇ ವಸತಿಗೃಹಗಳ ನಿರ್ಮಾಣಕ್ಕೆ ತಗಲಿದ ವೆಚ್ಚವು ಈಗಾಗಲೇ ನಿವಾಸಿಗಳ ಬಾಡಿಗೆಯಿಂದ ವಸೂಲಾಗಿದ್ದು, ಸರ್ಕಾರವು ಕಾಲಕಾಲಕ್ಕೆ ಸರಿಯಾಗಿ ನಿರ್ವಹಣೆ ಮಾಡದೇ ದುಸ್ಥಿತಿಗೆ ಈಡಾಗಿರುವುದಿಂದ ಅವುಗಳನ್ನು ಅಲ್ಲಿಯ ನಿವಾಸಿಗಳಿಗೆ ಮಾರಾಟ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಆ) ಇದರಿಂದ ಸರ್ಕಾರಕ್ಕೆ ವರ್ಷ ವರ್ಷ ತಗಲುವ ವೆಚ್ಚವು ಉಳಿದಂತಾಗುವುದಿಲ್ಲವೇ?

ಇ) ಈ ಹಿಂದೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಸಭೆಯವರು ನಿರ್ಮಿಸಿದ್ದು, ವಸತಿಗೃಹಗಳನ್ನು ಅಲ್ಲಿ ವಾಸವಾಗಿರುವ ನಿವಾಸಿಗಳಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅದೇ ರೀತಿ ರಾಜಾಜಿನಗರದ ವಸತಿಗೃಹಗಳನ್ನು ಅಲ್ಲಿಯ ನಿವಾಸಿಗಳಿಗೆ ಮಾರಾಟ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಉ) ಹಾಗಿದ್ದಲ್ಲಿ ರಾಜಾಜಿನಗರದ ವಸತಿಗೃಹಗಳನ್ನು ಅಲ್ಲಿಯ ನಿವಾಸಿಗಳಿಗೆ ಕಾಲ ಇರತಕ್ಕ ವರದಲ್ಲಿ ಮಾರಾಟ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಹಣ ಆದಾಯವಾಗುವುದಿಲ್ಲವೇ. ಈ ಬಗ್ಗೆ ಸರ್ಕಾರದ ನಿರ್ಧಾರ [illegible]?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ